## ಆಯುರ್ವೇದಕ್ಕೆ ಹೊಸಹೊಳಪು



5

ಕೊರೊನಾ ಸೋಂಕಿನ ನಿಯಂತ್ರಣಕ್ಕೆ ಪರಿಹಾರಗಳ ಹುಡುಕಾಟದಲ್ಲಿ ಹೆಚ್ಚು ಮುನ್ನೆಲೆಗೆ ಬಂದುದು, ಭಾರತೀಯ ವೈದ್ಯಪರಂಪರೆಯಾದ ಆಯುರ್ವೇದ. ಲಾಕ್‌ಡೌನ್ ಸಮಯದಲ್ಲಿ, ವೈದ್ಯಪದ್ಧತಿಯಾಗಿದ್ದ ಆಯುರ್ವೇದ ಅನೇಕರ ಪಾಲಿಗೆ ಜೀವನಪದ್ಧತಿಯಾಗಿ ಬದಲಾಯಿತು. ಬೆಳಗ್ಗೆ–ಸಾಯಂಕಾಲ ಕಷಾಯ ಕುಡಿಯುವವರ ಸಂಖ್ಯೆ ಹೆಚ್ಚಾಯಿತು. ಆಹಾರದಲ್ಲೂ ಆಯುರ್ವೇದದ ಘಮ ಕಾಣಿಸಿಕೊಂಡಿತು.

ವೈರಸ್‌ಗಳ ವಿರುದ್ಧದ ಪ್ರತಿರೋಧ ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಳದ ಹೆಸರಿನಲ್ಲಿ ಆಯುರ್ವೇದದ ಹೊಸ ಹೊಸ ಉತ್ಪನ್ನಗಳು ಪೇಟೆಯಲ್ಲಿ ಕಾಣಿಸಿಕೊಂಡವು. ಬಾಬಾ ರಾಮದೇವ್ ರಾಷ್ಟ್ರೀಯಮಟ್ಟದಲ್ಲಿ ಹಾಗೂ ಡಾ. ಗಿರಿಧರ್ ಕಜೆ ಕರ್ನಾಟಕದಲ್ಲಿ ಸಾಕಷ್ಟು ಸುದ್ದಿ ಮಾಡಿದರು. ಕಡಿಮೆ ಖರ್ಚು, ಅಡ್ಡ ಪರಿಣಾಮಗಳಿಲ್ಲ ಎನ್ನುವ ನಂಬಿಕೆಯ ಕಾರಣದಿಂದಾಗಿ ಜನ ಕೂಡ ಆಯುರ್ವೇದ ಔಷಧಿಗಳನ್ನು ಬಳಸತೊಡಗಿದರು. ಇದರಿಂದ ಕೊರೊನಾ ನಿಯಂತ್ರಣಕ್ಕೆ ಬಂತೋ ಇಲ್ಲವೋ ಎನ್ನುವುದು ಬೇರೆಯ ಮಾತು; ಆದರೆ, ದೊಡ್ಡ ಸಂಖ್ಯೆಯ ಜನ ಸಣ್ಣಪುಟ್ಟ ಸಮಸ್ಯೆಗಳಿಂದ ದೂರವುಳಿದದ್ದಂತೂ ಸುಳ್ಳಲ್ಲ.

## ಕೌಟುಂಬಿಕ ದೌರ್ಜನ್ಯದ ಹೆಚ್ಚಳ

> **ಕೋವಿಡ್-19ರ ವಿರುದ್ಧ ಹೋರಾಟ ನಡೆಸುವ ಈ ಸಂದರ್ಭದಲ್ಲಿ, ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗಟ್ಟುವುದನ್ನು ಎಲ್ಲ ಸರ್ಕಾರಗಳು ಆದ್ಯತೆಯ ವಿಷಯವನ್ನಾಗಿ ಪರಿಗಣಿಸಬೇಕು.**
>
> **-ಆಂಟೋನಿಯೊ ಗುಟೆರಸ್,**
>
> ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ

6

ಮನೆಮಂದಿಯೆಲ್ಲ ಮನೆಯಲ್ಲಿಯೇ ಉಳಿಯಬೇಕಾಗಿ ಬಂದಿರುವ ಸಾಮಾಜಿಕ ಸಂದರ್ಭವು ಕೌಟುಂಬಿಕ ಅನುಬಂಧವನ್ನು ಗಾಢಗೊಳಿಸಲಿಕ್ಕೆ ಸಹಕಾರಿ ಎನ್ನುವ ನಿರೀಕ್ಷೆಯನ್ನು ಹುಸಿಗೊಳಿಸುವ ಪ್ರಕರಣಗಳು ದೇಶದ ವಿವಿಧ ಭಾಗಗಳಿಂದ ವರದಿಯಾದವು. ಲಾಕ್‌ಡೌನ್ ಸಮಯದಲ್ಲಿ ಕೌಟುಂಬಿಕ ಹಿಂಸೆಯ ಘಟನೆಗಳು ಹೆಚ್ಚಾಗಿ, ದೌರ್ಜನ್ಯಕ್ಕೊಳಗಾದ ದೂರುಗಳು ಸಾಮಾನ್ಯ ಸಂದರ್ಭಗಳಿಗಿಂತಲೂ ದುಪ್ಪಟ್ಟು ಪ್ರಮಾಣದಲ್ಲಿ ವರದಿಯಾಗುತ್ತಿರುವುದಾಗಿ ರಾಷ್ಟ್ರೀಯ ಮಹಿಳಾ ಆಯೋಗ ಹೇಳಿದೆ. ರಾಜ್ಯಗಳಲ್ಲಿನ ಮಹಿಳಾ ಆಯೋಗಗಳಿಗೂ ಸಂತ್ರಸ್ತ ಮಹಿಳೆಯರ ದುಃಖದುಮ್ಮಾನದ ಬಹಳಷ್ಟು ದೂರುಗಳು ತಲುಪಿವೆ. ಲಾಕ್‌ಡೌನ್ ಸಂದರ್ಭದಲ್ಲಿ ಹೆಚ್ಚಾಗಿರುವ ಕೌಟುಂಬಿಕ ದೌರ್ಜನ್ಯಗಳ ಸಂಗತಿಯನ್ನು ಕೆಲವು ವಕೀಲರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಗಮನಕ್ಕೂ ತಂದಿದ್ದಾರೆ.

ಗಂಡಸರು ಕಚೇರಿಗೆ ಹೋಗುವ ಸಮಯ ಗೃಹಿಣಿಯರ ಪಾಲಿಗೆ ಕೊಂಚ ಬಿಡುವಿನ ಹಾಗೂ ಖಾಸಗಿ ಕ್ಷಣಗಳನ್ನು ಒದಗಿಸುವ ಸಂದರ್ಭವೂ ಹೌದು. ಲಾಕ್‌ಡೌನ್ ಸಮಯದಲ್ಲಿ ಮನೆಮಂದಿಯೆಲ್ಲ ಮನೆಯಲ್ಲಿಯೇ ಉಳಿಯಬೇಕಾದ ಸನ್ನಿವೇಶ, ಕೆಲವು ಮಹಿಳೆಯರ ಪಾಲಿಗೆ ಅಸಹನೀಯವಾಗಿ ಪರಿಣಮಿಸಿತು. ದಿನದ ಇಪ್ಪತ್ತನಾಲ್ಕು ತಾಸೂ ಮುಖಾಮುಖಿಯಾಗಿ ಇರಬೇಕಾದ ಸಮಯ, ಮನಸ್ಸುಗಳನ್ನು ಒಗ್ಗೂಡಿಸುವ ಬದಲು ವೈಮನಸ್ಸು ಉಂಟುಮಾಡತೊಡಗಿತು. ವ್ಯಸನಗಳಿಗೆ ಬಲಿಯಾದ ಗಂಡಸರಂತೂ ಲಾಕ್‌ಡೌನ್ ಸಮಯದಲ್ಲಿ ಉಸಿರುಗಟ್ಟಿದಂತಾಗಿ ತಮ್ಮ ಅಸಹನೆಯನ್ನೆಲ್ಲ ಮನೆಗಳಲ್ಲಿನ ಹೆಣ್ಣುಮಕ್ಕಳ ಮೇಲೆ ತೋರಿಸತೊಡಗಿದರು. ಪೊಲೀಸ್ ವ್ಯವಸ್ಥೆಯು ಲಾಕ್‌ಡೌನ್ ಜಾರಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಟೊಂಕ ಕಟ್ಟಿ ನಿಂತಿದ್ದರಿಂದಾಗಿ ಸಂತ್ರಸ್ತ ಹೆಣ್ಣುಮಕ್ಕಳಿಗೆ ಕಾನೂನಿನ ನೆರವು ಕೂಡ ದೊರೆಯಲಿಲ್ಲ.

